ಮನುಷ್ಯನ ವೀಕ್ ಪಾಯಿಂಟಿಗೆ ಕೈಹಾಕಬೇಕಾಗುತ್ತೆ. ಕೆಲವೊಮ್ಮೆ ಸಿಗರೇಟು ಕುಡಿಸಬೇಕಾಗುತ್ತೆ, ಬಿರಿಯಾನಿ ತಿನ್ನಿಸಬೇಕಾಗುತ್ತೆ... ಹೆಗಲ ಮೇಲೆ ಕೈಹಾಕಿ ಭಾಯೀ ಅನ್ನಬೇಕಾಗುತ್ತೆ... ಎದುರು ನಿಂತೋನ ಸೈಕಾಲಜಿನಾ ಇನ್ಸಟಂಟಾಗಿ ಸ್ಟಡಿ ಮಾಡಬೇಕಾಗುತ್ತೆ... ಅಧಿಕಾರಿಯೊಬ್ಬನ ಸಾಮರ್ಥ್ಯ ಅದರಾಗೇ ಇರೋದು ನೋಡಿ..." ಅನ್ನುತ್ತಿದ್ದರು.

ಮುಂದೆ ಟ್ರಾಫಿಕ್ಕು ಠಾಣೆಗೆ ವರ್ಗವಾದಾಗಲೂ ಸಾಹೇಬರು ಸುಮ್ಮನಿರಲಿಲ್ಲ. ಬರೀ ಬರಹಗಾರರಾಗಿಯೋ, ಕಂಪ್ಯೂಟರು ಕೆಲಸಕ್ಕೋ ನಿಯೋಜಿಸಲ್ಪಡುತ್ತಿದ್ದ ಮಹಿಳಾ ಸಿಬ್ಬಂದಿಗಳನ್ನೆಲ್ಲಾ ಪಾಯಿಂಟು ಡ್ಯೂಟಿಗಳಿಗೆ ಹಾಕಿ ರಸ್ತೆ ಮೇಲೆ ನಿಲ್ಲಿಸಿದರು. ಅಲ್ಲೀತನಕಾ ಸಂಚಾರಿ ಪೇದೆಗಳಿಗೆ ಕವಡೆ ಕಿಮ್ಮತ್ತು ಕೊಡದೆ ಅವರ ಮುಂದೆಯೇ ನಿಯಮಗಳನ್ನು ಉಲ್ಲಂಘಿಸಿ ಓಡಾಡಿಕೊಂಡಿರುತ್ತಿದ್ದ ಕೆಲವು ಪೋಕರಿ ಬೈಕು ಸವಾರರು ಈ ಮಹಿಳಾ ಪೇದೆಗಳಿಗೆ ಮಾತ್ರ ಅತೀವವಾದ ಗೌರವ ಕೊಡಲಾರಂಭಿಸಿದರು. ಪುರುಷ ಪೇದೆಗಳಿರುತ್ತಿದ್ದ ಪಾಯಿಂಟುಗಳಲ್ಲಿ ಬೇಕಂತಲೇ ಎಲ್ಲರಿಗೂ ಕಾಣುವ ಹಾಗೆ ಬೈಕುಗಳ ಮೇಲೆ ಕಸರತ್ತುಗಳನ್ನು ಮಾಡಿ ಕೈಗೇ ಸಿಗದೆ ನುಸುಳಿ ಪರಾರಿಯಾಗುತ್ತಿದ್ದವರು ಮಹಿಳಾ ಸಿಬ್ಬಂದಿಗಳಿರುವೆಡೆ ಮಾತ್ರ ನಾಯಿಮರಿಗಳಂತೆ ಬಾಲ ಮುದುಡಿಕೊಂಡು ತಿರುಗುತ್ತಿದ್ದುದನ್ನು ಕಂಡು ಸಾಹೇಬರಿಗೆ ಅಚ್ಚರಿ. 'ಅಂತದ್ದೇನ್ ಮಾಡುದ್ರಮ್ಮಾ ಅವರಿಗೆ ಟ್ರೀಟುಮೆಂಟು?' ಅಂತ ರೋಲ್‌ಕಾಲ್ ಸಮಯದಲ್ಲಿ ವಿಚಾರಿಸಿದಾಗ, "ನಮ್ ಹತ್ರನೂ ಹಂಗೇ ಬಾಲ ಬಿಚ್ಚೋದಿಕ್ಕೆ ಬಂದ್ರು ಸಾರ್... ಬುಡ್ತೀವಾ ನಾವು? ರಸ್ತೆ ಮೇಲೇನೆ ಎಲ್ಲಾರೆದ್ರುಗೆ ಮಕಮೂತಿ ನೋಡದೆ ಒಬ್ಬೊಬ್ಬನಿಗೂ ಏಕವಚನದಲ್ಲಿ ಮರ್ಯಾದಿ ಮಾಡಕ್ಕೆ ಶುರು ಮಾಡಿದಿವಿ ನೋಡಿ... ಈಗ ನಮ್ಮ ಮುಖ ಕಂಡ್ರೆ ಸಾಕು, ದೂರದಿಂದಾನೆ ಏನಕ್ಕಾ ಚೆನ್ನಾಗಿದೀರಾ... ಊಟ ತಿಂಡಿ ಆಯಿತಾ? ಅಂತ ವಿಚಾರಿಸೋ ಮಟ್ಟಕ್ಕೆ ಬಂದವ್ರೆ..." ಅಂತ ಮಹಿಳಾಮಣಿಗಳು ವಿವರಿಸುತ್ತಿದ್ದರು.

ಹೆಣ್ಮಕ್ಕಳಿಗೆ ರಜಾ ಕೊಡುವುದರಲ್ಲೂ ಚಿತ್ತರಂಜನ್ ಸಾಹೇಬರು ಎತ್ತಿದ ಕೈ. ಏನೇ ಹಬ್ಬ ಹರಿದಿನಗಳು ಬಂದರಂತೂ, "ಹೋಗ್ರಮ್ಮ ಹೋಗಿ ಹಬ್ಬ ಮಾಡಿ ಘಸ್ಟು... ಮಕ್ಕಳು ಮರೀಗುಳೆಲ್ಲಾ ಮನ್ಯಾಗೆ ಕಾಯ್ತಾ ಕುಂತಿರ್ತವೆ... ನೀವು ಬಂದಿಲ್ಲಿ ಕುಂತ್ಕಂಡ್ರೆ ಹಬ್ಬ ಮಾಡೋರು ಯಾರು? ಹೋಗ್ ಹೋಗಿ... ಡ್ಯೂಟಿ ಇದ್ದಿದ್ದೇ ದಿನಾ..." ಅನ್ನುತ್ತ ಅವರನ್ನೆಲ್ಲಾ ಮನೆಗೆ ಕಳಿಸಿಬಿಡುತ್ತಿದ್ದರು. ಆದರೆ ಅದೇ ಭಾಗ್ಯ ಮೀಸೆ ಹೊತ್ತವರಿಗಿರುತ್ತಿರಲಿಲ್ಲ. "ಎಲ್ರಿಗೂ ರಜಾ ಕೊಟ್ಟು ನಾನೇನು ಸ್ಟೇಷನ್ನಿಗೆ ಬೀಗ ಹಾಕ್ಕೊಂಡು ಹೋಗ್ಲಾ? ಹಬ್ಬದ ದಿನ ಮನೇಲಿ ಗಂಡಸ್ರಿಗೇನ್ರಯ್ಯಾ ಕೆಲ್ಸಾ?... ಹಿಂದಿನ ದಿನ ಹೋಗಿ ರೇಷನ್ನು ಬಟ್ಟೆ ಬರೆ ಕೊಡಿಸ್ಬುಟ್ಟು ಬನ್ನಿ... ಅಷ್ಟೆ ನಿಮ್ ಕೆಲ್ಸ... ಎಲ್ರೂ ರಜಾ ಹೋಗಿಬುಟ್ರೆ ಇಲ್ಲಿ ಬಂದೋಬಸ್ತು ಮಾಡೋರ್ಯಾರು?" ಅಂತ ಗುರುಗುಟ್ಟುತ್ತಿದ್ದರು.

ಇಲಾಖೆ ಶಿಸ್ತು ಸಾಹೇಬರ ರಕ್ತದಲ್ಲೇ ಇತ್ತೇನೋ ಎಂದು ಕೆಲವೊಮ್ಮೆ ಅನ್ನಿಸುತ್ತಿತ್ತು. ಯಾರಾದರೂ ಬೇಕಾಬಿಟ್ಟೆ ಸಲ್ಯೂಟು ಕೊಟ್ಟರೆಂದರೆ ಅಲ್ಲೇ ಅವರ ಪಿತ್ತ ನೆತ್ತಿಗೇರಿಬಿಡುತ್ತಿತ್ತು. ಕೆಲ ಹೊಸ ಸಿಬ್ಬಂದಿಗಳು ಈ ವಿಷಯ ಗೊತ್ತಿಲ್ಲದೆ ಅವರಿಂದ 'ಸನ್ಮಾನ' ಮಾಡಿಸಿಕೊಂಡಿರುವುದೂ ಉಂಟು. ಸಲ್ಯೂಟು ಹೊಡೆಯುವಾಗ ಅಧಿಕಾರಿಗಳ ತಲೆ ಮೇಲೆ ಪೀಕ್‌ಕ್ಯಾಪ್ ಮತ್ತು ಸಿಬ್ಬಂದಿಗಳ ತಲೆ ಮೇಲೆ ಸ್ಲೋಚ್‌ಹ್ಯಾಟ್ ಅನ್ನುವ ಟೊಪ್ಪಿ ಇರಲೇಬೇಕು. ಇದನ್ನು ಪ್ರತಿಯೊಬ್ಬರಿಗೂ ತರಬೇತಿ ಸಮಯದಲ್ಲೇ ಹೇಳಿಕೊಟ್ಟಿರುತ್ತಾರೆ. ಒಂದು ವೇಳೆ ತಲೆ ಮೇಲೆ ಕ್ಯಾಪು ಇರಲಿಲ್ಲ ಅಂದರೆ ಆಗ ಅಟೆನ್ಷನ್ ಭಂಗಿಗೆ ಬಂದು ಒಮ್ಮೆ ಎದೆ ಸೆಟೆಸಿ ಸಲ್ಯೂಟು ಕೊಡಬೇಕು. ಇಂಥದನ್ನೆಲ್ಲಾ